


ಇವನನ್ನು ಬಿಟ್ಟು ಹೋಗುತ್ತಾರೋ ಗೊತ್ತಿಲ್ಲ. ಆದರೆ, ಅವನಿಗೆ ಹುಟ್ಟಿದ ಮಕ್ಕಳು ಅವನಿಗೇ ಗುರುತಿಗೆ ಸಿಗದಷ್ಟು ಇವೆ. ನಾಕು ಹೆಂಡತಿಯರಿಗೂ ಈಗ ಬೇರೆ ಬೇರೆ ಸಂಸಾರ ಆಗಿ ಯಾವುದೋ ಊರುಗಳಲ್ಲಿ ನೆಲೆ ನಿಂತಿದ್ದಾರೆ. ಮಂಕ್ರ ಮಾತ್ರ ಒಬ್ಬಂಟಿ. ಹೊಳೆ ಬದಿಯಲ್ಲಿ ಸೋಗೆ ಹೆಣೆದು ಒಂದು ಗುಡಾರ ಮಾಡಿಕೊಂಡಿದ್ದಾನೆ. ಜೋರಾಗಿ ಎರಡು ದಿನ ಮಳೆ ಹೊಯ್ಯಿತು ಅಂದರೆ ಅವನ ಬಿಡಾರ ನೆಲಸಮ ಆಗುವುದರಲ್ಲಿ ಸಂಶಯವಿಲ್ಲ. ಮೊದಲೆಲ್ಲಾ ಅಲ್ಲಿ ಇಲ್ಲಿ ಕೆಲಸಕ್ಕೆ ಹೋಗುತ್ತಿದ್ದ. ದುಡಿದದ್ದೆಲ್ಲಾ ಗಡಂಗಿಗೆ ಸುರಿದು ಬಿಡುತ್ತಿದ್ದ. ಹಾಗಾಗಿ ಸಂಬಳ ಸಿಕ್ಕಿದ ದಿನ ಕಂಠಮುಟ್ಟ ಕುಡಿದರೆ ಮತ್ತೆ ಅದು ಪಿರಿಯುವವರೆಗೆ ಅವನು ಕೆಲಸಕ್ಕೆ ಹೋಗುತ್ತಿರಲಿಲ್ಲ. ಹಾಗಾಗಿ, 'ಮಂಕ್ರ ಇವತ್ತು ಬಂದರೆ ನಾಳೆ ಇಲ್ಲ, ಇವನನ್ನ ನೆಚ್ಚಿದರೆ ಕೆಲಸ ಆಗುದಿಲ್ಲ'ಅಂತ ಅವನಿಗೆ ಯಾರೂ ಖಾಯಂ ಕೆಲಸ ಕೊಡುತ್ತಿರಲಿಲ್ಲ. ಇತ್ತೀಚೆಗೆ ಕುಡಿತದಿಂದ ಆರೋಗ್ಯವೂ ಇಲ್ಲ, ವಯಸ್ಸು ಬೇರೆ ಆಯಿತು ಅಂತ ಅವನು ಕೆಲಸಕ್ಕೆ ಹೋಗದೆ ಬಿಡಾರದಲ್ಲಿಯೇ ಬೀಡಿ ಸೇದಿಕೊಂಡು ಇರುತ್ತಿದ್ದ. ಸರಕಾರದಿಂದ ಒಂದಷ್ಟು ಪಿಂಚಣಿ ಬರುತ್ತಿತ್ತು. ಉಚಿತವಾಗಿ ಅಕ್ಕಿ ಸಿಗುತ್ತಿತ್ತು. ಅವಿಷ್ಟರಲ್ಲೇ ಹೇಗೋ ಬದುಕಿಕೊಂಡು ಇರುತ್ತಿದ್ದ. ಸರಕಾರದಿಂದ ಸಿಗುತ್ತಿದ್ದದ್ದು ಬೆಳ್ತಿಗೆ ಅಕ್ಕಿ. ಅದು ಅವನಿಗೆ ತಿಂದರೆ ಉಷ್ಣ. ಹಾಗಾಗಿ ಪಕ್ಕದ ಗೂಡಂಗಡಿಗೆ ಅದನ್ನು ಕಡಿಮೆ ರೇಟಿಗೆ ಕೊಟ್ಟು ಕುಚ್ಚಲಕ್ಕಿ ಉಪ್ಪು ಹುಳಿ ಮೆಣಸು ಖರೀದಿಸುತ್ತಿದ್ದ. ನಂಜಿಕೊಳ್ಳಲು ದಿನಾ ಗಾಳ ಹಾಕಿ ಮೀನು ಹಿಡಿಯುತ್ತಿದ್ದ. ಮೀನನ್ನು ಮಣ್ಣಿನ ಬಿಸಲೆಯಲ್ಲಿ ಹಾಕಿ ಉಪ್ಪು ಹುಳಿ ಮೆಣಸು ಸೇರಿಸಿ ಕುದಿಸಿದರೆ ಗಂಜಿ ಜೊತೆ ಉಣ್ಣಲೂ ಹೆಂಡದ ಜೊತೆ ನಂಜಿಕೊಳ್ಳಲು ಎರಡೂ ಸಾಕಾಗುತ್ತಿತ್ತು. ಕೆಲವೊಮ್ಮೆ ಕೂರಿ ಹಾಕಿಯೋ, ಬಲೆ ಕಟ್ಟಿಯೋ ಮೀನು ಹಿಡಿಯುವಾಗ ತುಸು ಹೆಚ್ಚೇ ಸಿಗುತ್ತಿತ್ತು. ಆಗೆಲ್ಲ ಹಿಂದೆ ಕೆಲಸಕ್ಕೆ ಹೋಗುತ್ತಿದ್ದ ಮಾದಪ್ಪ ಗೌಡರ ಮನೆಗೋ, ಚಿನ್ನಪ್ಪ ಗೌಡರ ಮನೆಗೋ ತೆಗೆದುಕೊಂಡು ಹೋಗಿ ಕೊಟ್ಟರೆ ಆ ದಿನದ ಹೆಂಡದ ಖರ್ಚಿಗೆ ಭರ್ತಿಯಾಗುತ್ತಿತ್ತು. ಇನ್ನು ಮಳೆಗಾಲ ಬಂತೆಂದರೆ ಅವನಿಗೆ ಸುಗ್ಗಿ ಕಾಲ. ಒಂದೊಂದೇ ತೆಂಗಿನಕಾಯಿ ತೇಲುತ್ತಾ ಬರುವುದನ್ನು ಹಿಡಿದು ಗೋಣಿಗೆ ತುಂಬಿಸುವಲ್ಲಿ ಭಾಳ ನಿಪುಣ. ಯಾರು ಯಾರದೋ ತೋಟದ ತೆಂಗಿನ ಕಾಯಿ. ಇವನು ಹಿಡಿಯದಿದ್ದರೂ ಅದು ಬೊಳ್ಳ ಹೋಗುತ್ತಿತ್ತು. ಹಾಗಾಗಿ ಮಂಕ್ರನನ್ನು ಯಾರೂ ಪ್ರಶ್ನಿಸುವ ಹಾಗಿಲ್ಲ. ಒಳ್ಳೆ ಮಳೆ ಬಂತೆಂದರೆ ಸಾಕಷ್ಟು ತೆಂಗಿನಕಾಯಿಯ ದಾಸ್ತಾನು ಅವನ ಬಿಡಾರದಲ್ಲಿ ಇರುತ್ತಿತ್ತು. ಶೀತ ಜ್ವರ ಕೆಮ್ಮು ಬಂದಾಗ, ಅದೂ ಇದೂ ಎಡೆ ಖರ್ಚಿಗೆ ಎರಡೆರಡೇ ತೆಂಗಿನಕಾಯಿ ಮಾರುತ್ತಿದ್ದ. ಈ ಸಲದ ವರ್ಷಧಾರೆಯಂತೂ ಅವನ ಪಾಲಿಗೆ ಹರ್ಷದಾಯಕವೇ. ಮಳೆಗೆ ಹಾಳಾಗಲೂ ನಷ್ಟವಾಗಲೂ ಚರಾಸ್ಥಿರ ಆಸ್ತಿ ಅವನ ಪಾಲಿಗೆ ಇದ್ದರೆ ತಾನೇ?

'ಈ ಸಲ ಅಂತೂ ನಮ್ಮ ಅಂಗಳದ ಕಾಯಿ ಅಡಿಕೆ ಪೂರ ಮಂಕ್ರನ ಬಿಡಾರಲಿ, ನಾವೇ ಅವನ ಹಕ್ಕಲೆ ಕ್ರಯಕ್ಕೆ ತರಕಾದ' ಅಂತ ಊರವರು ನಗುತ್ತಾ ಹೇಳಿದರೂ, ಮಳೆ ಇನ್ನೆನೂ ಗಂಡಾಂತರ ತಂದು ಹಾಕುತ್ತದೋ? ಈ ಮಳೆಗಾಲ ಉಪವಾಸ ಬೀಳದಿದ್ದರೆ ಸಾಕು ಅಂತ ಒಳಗೊಳಗೆ ದಿಗಿಲುಗೊಂಡಿರುವಾಗ, ಮಂಕ್ರ ತಲೆಗೊಂದು ಪ್ಲಾಸ್ಟಿಕ್ ಟೊಪ್ಪಿ ಧರಿಸಿಕೊಂಡು ಕಣ್ಣಲ್ಲಿ ಕಣ್ಣಿಟ್ಟು ತೆಂಗಿನಕಾಯಿ ಎಲ್ಲಿ ಬರುತ್ತಿದೆ ಎಂದು ಪ್ರವಾಹದಲ್ಲಿ ಚಿತ್ತ ನೆಟ್ಟಿದ್ದಾನೆ. ನೀರ ಹರಿವಿನ ರಭಸಕ್ಕೆ ಸ್ವಲ್ಪ ಆಚೆ ಈಚೆ ಮನಸ್ಸು ಕದಲಿಸಿದರೂ ಕಾಯಿ ತಪ್ಪಿ ಹೋಗುತ್ತಿತ್ತು. ಮೈ ಇಡೀ ಥಂಡಿಯಾಗಿ ಬೀಡಿ ಸೇದುವ ಅಂತ ಒಳಗೊಳಗೆ ಮನಸ್ಸಾದರೂ ಅದನ್ನು ಹತ್ತಿಕ್ಕಿ ನೀರ ಹರಿವನ್ನೇ ದಿಟ್ಟಿಸುತ್ತಿದ್ದಾನೆ. ಅಷ್ಟರಲ್ಲಿ ಕೂದಲೆಳೆಯ ಅಂತರದಲ್ಲಿ ತೇಲಿ ಬರುವ ಜೋಡಿ ಕಾಯಿಗಳು! ರಪಕ್ಕನೆ ಹಿಡಿದೆಳೆದು ತನ್ನ ಗೋಣಿಗೆ ತುಂಬಿಸಿಕೊಂಡ.

ಹೋ... ದೇವರೇ...! ಈ ಮಳೆಯಲ್ಲಿ ಒಬ್ಬೊಬ್ಬರದು ಒಂದೊಂದು ಲೆಕ್ಕಾಚಾರ ಅಂತ ನೆನೆದುಕೊಳ್ಳುತ್ತಾ ಇನ್ನೊಂದಷ್ಟು ಹೊತ್ತು ಕಳೆದರೆ ನೀರಿನ ಹರಿವಿನ ರಭಸಕ್ಕೆ ಸೇತುವೆ ತುಂಡೇ ಆಗಬಹುದು ಅನ್ನುವ